ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಪರೀಕ್ಷಾ ವಿಭಾಗ

"ಜ್ಞಾನ ಗಂಗಾ" ಕಲಬುರಗಿ-585106, ಕರ್ನಾಟಕ, ಭಾರತ. ದೂರವಾಣಿ ಸಂಖ್ಯೆ: 08472-263203

ಫ್ಯಾಕ್ಸ್ : 08472-263207 ಇ-ಮೇಲ್ : regegug@rediffmail.com, rege@gug.ac.in

ಸಂಖ್ಯೆ:ಗುವಿಕ/ಪರೀಕ್ಷಾ/ಸಿ1(14)/2026-27/ 2003 ದಿನಾಂಕ: 03/11/26

ಅಧಿಸೂಚನೆ

ವಿಷಯ: ನವೆಂಬರ್/ಡಿಸೆಂಬರ್-2026 ರಲ್ಲಿ ಜರುಗಲಿರುವ ಪದವಿ ಕೋರ್ಸಿನ (NEP) ಪ್ರಥಮ, ತೃತೀಯ, ಐದನೇ ಮತ್ತು ಏಳನೇ ಸೆಮೆಸ್ಟರ್‌ನ (ಬಿ.ಪಿ.ಎ) ರಿಪಿಟರ್ಸ್ ಕೋರ್ಸುಗಳ ಲಿಖಿತ ಪರೀಕ್ಷೆಗಳ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಅಧಿಸೂಚನೆ ಸಂಖ್ಯೆ ಗುವಿಕ/ಪಿಮಪಿ/ಸ್ನಾತಕ/ಪದವಿ/ನೇಪ/2026-27/107 ದಿನಾಂಕ 03.07.2026

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 30.10.2026

*****

ನವೆಂಬರ್/ಡಿಸೆಂಬರ್-2026 ರಲ್ಲಿ ಜರುಗಲಿರುವ ಬಿ.ಎ, ಬಿ.ಎಸ್ಸಿ, ಬಿ.ಕಾಂ, ಬಿಬಿಎ, ಬಿಸಿಎ, ಬಿವಿಎ, ಹಾಗೂ ಬಿ.ಎಸ್.ಡಬ್ಲೂ ಪದವಿ ಕೋರ್ಸಿನ (NEP) ಪ್ರಥಮ, ತೃತೀಯ, ಐದನೇ ಮತ್ತು ಏಳನೇ ಸೆಮೆಸ್ಟರ್‌ನ (ರಿಪಿಟರ್ಸ್) ಲಿಖಿತ ಪರೀಕ್ಷೆಗಳ ಆನ್‌ಲೈನ್ ಪರೀಕ್ಷಾ ಶುಲ್ಕ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಹಾಗೂ ಪರೀಕ್ಷೆಗಳು ಪ್ರಾರಂಭವಾಗುವ ತಾತ್ಕಾಲಿಕ ವಿವರಗಳನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.

ಭಾಗ-1

ಕ್ರಸಂ	ವಿವರಗಳು	BA / B.COM / BSW	BSC / BCA /BBA/BVA
1.	ಪರೀಕ್ಷಾ ಶುಲ್ಕ (Without Practical)	ರೂ.1350 /-	ರೂ. 1350/-
2.	ಪರೀಕ್ಷಾ ಶುಲ್ಕ (With Practical)	ರೂ.1500 /-	ರೂ. 1500/-
3.	ಅಂಕಪಟ್ಟಿ ಶುಲ್ಕ	ರೂ. 180/-	
4.	ಅರ್ಜಿ ತಪಾಸಣೆ ಶುಲ್ಕ	ರೂ. 20/-	
5	ಅರ್ಜಿಗಳ ಸಂಸ್ಕರಣ ಶುಲ್ಕ	ರೂ. 120/-	

ಭಾಗ-2

ಕ್ರಸಂ	ವಿವರಗಳು	ದಿನಾಂಕ
1.	ವಿದ್ಯಾರ್ಥಿಗಳು ಆನ್‌ಲೈನ್ UUCMS ಪೋರ್ಟಲ್‌ನಲ್ಲಿ ಪರೀಕ್ಷಾ ಶುಲ್ಕದೊಂದಿಗೆ ಅರ್ಜಿ ಸಲ್ಲಿಸುವ ದಿನಾಂಕ (ದಂಡರಹಿತ)	06.11.2026 ರಿಂದ 16.11.2026
2.	ವಿದ್ಯಾರ್ಥಿಗಳು ಆನ್‌ಲೈನ್ UUCMS ಪೋರ್ಟಲ್‌ನಲ್ಲಿ ಪರೀಕ್ಷಾ ಶುಲ್ಕದೊಂದಿಗೆ ಅರ್ಜಿ ಸಲ್ಲಿಸುವ ಕಡೆಯ ದಿನಾಂಕ (ದಂಡ ಸಹಿತ ರೂ. 100/-)	17.11.2026 ರಿಂದ 19.11.2026
3.	ವಿದ್ಯಾರ್ಥಿಗಳು ಆನ್‌ಲೈನ್ UUCMS ಪೋರ್ಟಲ್‌ನಲ್ಲಿ ಪರೀಕ್ಷಾ ಶುಲ್ಕದೊಂದಿಗೆ ಅರ್ಜಿ ಸಲ್ಲಿಸುವ ಕಡೆಯ ದಿನಾಂಕ (ದಂಡ ಸಹಿತ ರೂ.100+ ರೂ.650= ರೂ.750/-)	20.112026 ರಿಂದ 22.11.2026
4.	ಆಂತರಿಕ ಅಂಕಗಳನ್ನು UUCMS ಪೋರ್ಟಲ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ	23.11.2026
5.	ಪರೀಕ್ಷಾ ಪ್ರವೇಶ ಪತ್ರಗಳನ್ನು (Hall Ticket) UUCMS ಪೋರ್ಟಲನಿಂದ ಪಡೆಯಲು ಪ್ರಾರಂಭಿಸುವ ದಿನಾಂಕ	24.11.2026 ರಿಂದ 25.11.2026
6.	ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ತಾತ್ಕಾಲಿಕ ದಿನಾಂಕ	26.11.2026 ರಿಂದ 10.12.2026
7.	ಪ್ರಾಯೋಗಿಕ ಪರೀಕ್ಷೆಗಳ ದಿನಾಂಕ	11.12.2026 ರಿಂದ 26.12.2026

250

ಸೂಚನೆಗಳು

1. **ನವೆಂಬರ್/ಡಿಸೆಂಬರ್-2026ರ** ಪರೀಕ್ಷಾ ಅರ್ಜಿಗಳನ್ನು ಆನಲೈನ್ ಮೂಲಕ ಸಲ್ಲಿಸಬಹುದಾಗಿದ್ದು, ಯಾವುದೇ ಕಾರಣಕ್ಕೂ ಮ್ಯಾನವಲ್ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.
2. ಯಾವುದೇ ಕಾರಣಕ್ಕೂ ಪರೀಕ್ಷಾಕೇಂದ್ರದ ಬದಲಾವಣೆಗೆ ಅವಕಾಶವಿರುವದಿಲ್ಲ.
3. ಅಂಕಪಟ್ಟಿಗಳ ಪ್ರತಿಗಳನ್ನು ಆಯಾ ಮಹಾವಿದ್ಯಾಲಯದ ಪ್ರಾಂಶುಪಾಲರೇ ದೃಢೀಕರಿಸಬೇಕು ಹಾಗೂ ಹಿಂದಿನ ಪರೀಕ್ಷೆಯ ಪಾಸಾದ ಬಗ್ಗೆ ಪ್ರಾಂಶುಪಾಲರು ದೃಢೀಕರಿಸಲ್ಪಟ್ಟ ಅಂಕಪಟ್ಟಿಗಳ ಝರಾಕ್ಸ ಪ್ರತಿಗಳನ್ನು ಸಲ್ಲಿಸಬೇಕು.
4. ಒಮ್ಮೆ ಪಾವತಿಸಲಾದ ಪರೀಕ್ಷಾ ಶುಲ್ಕವನ್ನು ಯಾವುದೇ ಕಾರಣಕ್ಕೂ ಮರುಪಾವತಿ ಮಾಡಲಾಗುವುದಿಲ್ಲ ಹಾಗೂ ಅದನ್ನು ಮುಂದಿನ ಪರೀಕ್ಷೆಗಳಿಗೆ ಸರಿದೂಗಿಸಿಕೊಳ್ಳಲಾಗುವುದಿಲ್ಲ ಮತ್ತು ಇಂತಹ ವಿಷಯಗಳಿಗೆ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.
5. ಯಾವುದೇ ಪರಿಸ್ಥಿತಿಯಲ್ಲಿ ಅಧಿಸೂಚನೆಯಲ್ಲಿ ನಿಗದಿಪಡಿಸಿ ತಿಳಿಸಿದ ಕೊನೆಯ ದಿನಾಂಕ ಮುಗಿದ ನಂತರಬಂದಂತಹ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಯಾವುದೇ ಕಾರಣಕ್ಕಾಗಿ ಪರೀಕ್ಷೆಗಳು ಮುಂದೂಡಿದಲ್ಲಿ ಶುಲ್ಕ ಪಾವತಿಸುವ ದಿನಾಂಕಗಳು ಬದಲಾವಣೆಯಾಗುವುದಿಲ್ಲ.
6. ವಿಶ್ವವಿದ್ಯಾಲಯ ನಿಗದಿಪಡಿಸಿದ ಪರೀಕ್ಷಾ ಅರ್ಜಿ ತಾಪಾಸಣೆ ಶುಲ್ಕ ರೂ.20/- ರಲ್ಲಿ ವಿದ್ಯಾರ್ಥಿಗಳ ರೂ.10/-ನ್ನು ಪರೀಕ್ಷಾಂಗ ವಿಭಾಗ ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಇವರಿಗೆ ಪಾವತಿಸಬೇಕು. ಉಳಿದ ರೂ.10/-ನ್ನು ತಮ್ಮ ಕಾಲೇಜಿನ ಪ್ರಾಂಶುಪಾಲರ ಬ್ಯಾಂಕ್ ಖಾತೆಗೆ ಪಾವತಿಸಬೇಕು.
7. ಅಭ್ಯರ್ಥಿಗಳು ಪರೀಕ್ಷೆಯಲ್ಲಿ ತಮ್ಮ ಉತ್ತರಗಳನ್ನು ಕೇವಲ ಇಂಗ್ಲೀಷ ಇಲ್ಲವೆ ಕನ್ನಡ ಮಾಧ್ಯಮದಲ್ಲಿ ಮಾತ್ರ ಬರೆಯಲು ಅವಕಾಶವಿದೆ. ಉಳಿದ ಭಾಷೆಗಳಲ್ಲಿ ಬರೆಯತಕ್ಕದ್ದಲ್ಲ ಎಂಬುದನ್ನು ಪ್ರಾಂಶುಪಾಲರು ಅಭ್ಯರ್ಥಿಗಳ ಗಮನಕ್ಕೆ ತರಬೇಕು. ವಿದ್ಯಾರ್ಥಿಗಳು ಇಂಗ್ಲೀಷ ಇಲ್ಲವೆ ಕನ್ನಡ ಮಾಧ್ಯಮದಲ್ಲಿ ಬರೆಯದೇ ಬೇರೆ ಮಾಧ್ಯಮದಲ್ಲಿ ಬರೆದರೆ ಅಂತಹ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳು ಮೌಲ್ಯಮಾಪನವಾಗದೇ ಉಳಿಯುತ್ತವೆ. ಅಂತಹ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶವನ್ನು ಅನೂರ್ಜಿತಗೊಳಿಸಲಾಗುವುದೆಂದು ಅಭ್ಯರ್ಥಿಗಳಿಗೆ ಮನವರಿಕೆ ಮಾಡಿಕೊಡಬೇಕು. ಇದು ಭಾಷಾ ವಿಷಯಗಳಿಗೆ ಅನ್ವಯವಾಗುವುದಿಲ್ಲ.
8. ಪ್ರಾಂಶುಪಾಲರು ತಮ್ಮ ಕಚೇರಿಯ ಸಿಬ್ಬಂದಿಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಈ ಅಧಿಸೂಚನೆಯಲ್ಲಿ ತಿಳಿಸಿದ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವ ಹೊಣೆಗಾರಿಕೆ ಅವರದ್ದಾಗಿದೆ. ಎಂಬುದು ಮನವರಿಕೆ ಮಾಡಿಕೊಡಲು ಸೂಚಿಸಲಾಗಿದೆ.
9. **ಪುನರಾವರ್ತಿತ (ರಿಪೀಟರ್ಸ) ವಿದ್ಯಾರ್ಥಿಗಳು ವಿಶ್ವವಿದ್ಯಾಲಯವು ನಿಗದಿ ಪಡಿಸಿದ ಪೂರ್ಣ ಶುಲ್ಕವನ್ನು ಪಾವತಿಸಬೇಕು. ಭಾಗಶಃ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳು ಒಂದು ಪತ್ರಿಕೆಗೆ ಪರೀಕ್ಷಾ ಶುಲ್ಕ ರೂ.250/-ಎರಡು ಪತ್ರಿಕೆಗೆ ರೂ.500/- ಹಾಗೂ ಎರಡಕ್ಕಿಂತ ಹೆಚ್ಚಿನ ಪತ್ರಿಕೆಗಳಿದ್ದಲ್ಲಿ ಪೂರ್ಣ ಶುಲ್ಕ ಪಾವತಿಸುವುದು. ಸದರಿ ಶುಲ್ಕದ ಜೊತೆಗೆ ಅಂಕಪಟ್ಟಿ ಶುಲ್ಕ ಹಾಗೂ ಪರಿಶೀಲನೆ ಶುಲ್ಕ ಪಾವತಿಸುವುದು ಕಡ್ಡಾಯವಾಗಿದೆ.**

02/11/26

ಕುಲಸಚಿವರು (ಮೌಲ್ಯಮಾಪನ)
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಗೆ,
ಗುಲಬರ್ಗಾ ವಿಶ್ವವಿದ್ಯಾಲಯ ವ್ಯಾಪ್ತಿಯ ಎಲ್ಲಾ ಪದವಿ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

ಪ್ರತಿಗಳು:

1. ವಿತ್ತಾಧಿಕಾರಿಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
2. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಕಲಬುರಗಿ
3. ಸರಕಾರಿ ಲೆಕ್ಕ ಪರಿಶೋಧಕರು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
4. ಸಮಾಜಕಲ್ಯಾಣ / ಹಿಂದುಳಿದ ವರ್ಗ & ಅಲ್ಪಸಂಖ್ಯಾತರ ಇಲಾಖೆಗಳ ಜಿಲ್ಲಾ ಅಧಿಕಾರಿಗಳಿಗೆ
5. ವಿಶೇಷಾಧಿಕಾರಿಗಳು, ವಿದ್ಯಾಮಂಡಲ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ರವರ ಮಾಹಿತಿಗಾಗಿ.
6. ಕಚೇರಿ ಅಧೀಕ್ಷಕರು/ಸಹಾಯಕ ಕಚೇರಿ ಅಧೀಕ್ಷಕರು, ಪರೀಕ್ಷಾ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯದ ರವರ ಮಾಹಿತಿಗಾಗಿ.
7. ನೋಡಲ್ ಅಧಿಕಾರಿಗಳು UUCMS ಗು.ವಿ ಕಲಬುರಗಿ ರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
8. ಮುಖ್ಯಸ್ಥರು, ಗಣಕ ಕೇಂದ್ರ, ಪರೀಕ್ಷಾ ಶಾಖೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ. ಈ ಅಧಿಸೂಚನೆಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
9. ಉಗ್ರಾಣ ಪಾಲಕರು, ಉಗ್ರಾಣ ಶಾಖೆ, ಪರೀಕ್ಷಾ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
10. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು/ಕುಲಸಚಿವರು/ಕುಲಸಚಿವರು(ಮೌಲ್ಯಮಾಪನ) ಅವರ ಆಪ್ತ ಸಹಾಯಕರು, ಗು.ವಿ.ಕಲಬುರಗಿ.